# ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ
# DIRECTORATE OF MEDICAL EDUCATION

ಆನಂದರಾವ್ ವೃತ್ತ, ಬೆಂಗಳೂರು-9.
Ananda Rao Circle, Bangalore-9.
Email:dmekarnataka@yahoo.com.n
Ph: 080-22870060

ಸಂಖ್ಯೆ: ವೈಶಿ/ಎಸ್ಆರ್ಓ(1)/32/2020 21 Date: 07 -12-2020

## ತಿದ್ದುಪಡಿ ಅಧಿಸೂಚನೆ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ.

ಇಲ್ಲಿ ಖಾಲಿ ಇರುವ ನಿರ್ದೇಶಕರ ಹುದ್ದೆಯ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಕನಿಷ್ಠ ವಿದ್ಯಾರ್ಹತೆ ಮತ್ತು ಇತರೆ ವಿವರಗಳು ಎಂ.ಸಿ.ಐ ನಿಯಮಾವಳಿಗಳನ್ವಯ ಹಾಗೂ ಸದರಿ ಸಂಸ್ಥೆಯ ಬೈಲಾಗಳನ್ವಯ ಪರಿಗಣಿಸಲಾಗುವುದು.

### ಅರ್ಹತಾ ಮಾನದಂಡಗಳು:

1. ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರಾಧ್ಯಾಪಕರ ಪೈಕಿ ಜೇಷ್ಠತೆ ಮತ್ತು ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡಲಾಗುವುದು.
2. ಭಾರತೀಯ ವೈದ್ಯಕೀಯ ಪರಿಷತ್ತಿನಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಿಂದ ವೈದ್ಯಕೀಯ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿ ಕರ್ನಾಟಕದ ಸರ್ಕಾರಿ ಸ್ವಾಯುತ್ತ ವೈದ್ಯಕೀಯ ಕಾಲೇಜು/ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷ ಪ್ರಾಧ್ಯಾಪಕರು/ಸಹಪ್ರಾಧ್ಯಾಪಕರು/ರೀಡರ್ ಆಗಿ ಕರ್ತವ್ಯ ನಿರ್ವಹಿಸಿದ ಬೋಧನಾ ಅನುಭವ ಹೊಂದಿರಬೇಕು. ಈ ಪೈಕಿ ವಿಭಾಗವೊಂದರಲ್ಲಿ ಕನಿಷ್ಠ 5 ವರ್ಷ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿರಬೇಕು. ಈ ಹುದ್ದೆಗಳ ನೇಮಕಾತಿಯಲ್ಲಿ ವಿಭಾಗದ ಮುಖ್ಯಸ್ಥರಿಗೆ ಆದ್ಯತೆ ನೀಡಲಾಗುವುದು. ನಿರ್ದೇಶಕರ ಆಯ್ಕೆಯನ್ನು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಮಾವಳಿ ಪ್ರಕಾರ ಹಾಗೂ ಸಂಸ್ಥೆಗಳ ಬೈಲಾ ರೀತ್ಯಾ ಮಾಡಲಾಗುವುದು.
3. ಅಭ್ಯರ್ಥಿಗಳು ವೈದ್ಯಕೀಯ ಅಧೀಕ್ಷಕರಾಗಿ ಆಡಳಿತಾನುಭವ ಹೊಂದಿರಬೇಕು ಅಥವಾ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿ 5 ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಿದವರಿಗೆ ಆದ್ಯತೆ ನೀಡಲಾಗುವುದು.
4. ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು 58 ವರ್ಷಗಳನ್ನು ಮೀರಿರಬಾರದು ಅಥವಾ ವಯೋನಿವೃತ್ತಿ ಹೊಂದಲು ಕನಿಷ್ಠ 2 ವರ್ಷಗಳ ಸೇವಾ ಅವಧಿ ಬಾಕಿ ಇರಬೇಕು.
5. ಅಭ್ಯರ್ಥಿಯು ಖಾಯಂ ಪೂರ್ವ ಸೇವಾ ಅವಧಿಯನ್ನು ಪೂರ್ಣಗೊಳಿಸಿರಬೇಕು.

**ವೇತನ ಶ್ರೇಣಿ:-** 37,400-67,000 + ಎ.ಜಿ.ಪಿ 10,000/- ಮತ್ತು ಅನ್ವಯವಾಗುವ ಭತ್ಯೆಗಳು.

ಪು.ತಿ.ನೋ.